# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ) ರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು –02.**

ಸಂಖ್ಯೆ: ಜಂನಿನಯೋ (ದ)/ಪ್ರಾ.ಪ/ಸನಿ/14/2021-22

ದಿನಾಂಕ: 29-01-2022.

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಖಾತಾ ಸಂಖ್ಯೆ 340/341/54, ವಿಸ್ತೀರ್ಣ 19796.09 ಚ.ಮೀ, ಕೆಂಚೇನಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ರಾಜರಾಜೇಶ್ವರಿನಗರ ವಲಯ, ವಾರ್ಡ್ ಸಂಖ್ಯೆ: 198, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ವಸತಿ ಸಮುಚ್ಚಯ ಹಾಗೂ ಕ್ಲಬ್‌ಹೌಸ್ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ತಮ್ಮ ಮರು ಮನವಿ ದಿ: 28-10-2021.

2) ಪರಿಷ್ಕೃತ ನಕ್ಷೆ ಮಂಜೂರಾತಿ ಎಲ್.ಪಿ ಸಂಖ್ಯೆ: BBMP/ Addl.Dir/JD South/LP/0048/19-20 ದಿ: 08–03–2021.

3) ಅಪರ ನಿರ್ದೇಶಕರು, ನಗರ ಯೋಜನೆ ರವರ ಅನುಮೋದನೆ ದಿನಾಂಕ: 16-12-2021.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಮನವಿಯನ್ವಯ ಖಾತಾ ಸಂಖ್ಯೆ 340/341/54, ವಿಸ್ತೀರ್ಣ 19796.09 ಚ.ಮೀ, ಕೆಂಚೇನಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ರಾಜರಾಜೇಶ್ವರಿನಗರ ವಲಯ, ವಾರ್ಡ್ ಸಂಖ್ಯೆ: 198, ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ ವಿಂಗ್ 1 – ಬ್ಲಾಕ್ 1 ರಿಂದ 4 ರಲ್ಲಿ ತಳ + ನೆಲ + ಮೇಲಿನ 10 ಅಂತಸ್ತುಗಳ 240 ಘಟಕಗಳುಳ್ಳ ವಸತಿ ಸಮುಚ್ಚಯ ಹಾಗೂ ಕ್ಲಬ್‌ಹೌಸ್ ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ. ಸಂಖ್ಯೆ: BBMP/ Addl.Dir/JD South/LP/0048/19-20 ದಿನಾಂಕ: 08–03–2021 ರಂದು ಪರಿಷ್ಕೃತ ನಕ್ಷೆ ಮಂಜೂರಾತಿಯನ್ನು ಉಲ್ಲೇಖ (2) ರಂತೆ ಅನುಮೋದನೆಯನ್ನು ನೀಡಲಾಗಿರುತ್ತದೆ.

ವಸತಿ ಸಮುಚ್ಚಯ ಹಾಗೂ ಕ್ಲಬ್‌ಹೌಸ್ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ಉಲ್ಲೇಖ (3) ರಂತೆ ಅಪರ ನಿರ್ದೇಶಕರು, ನಗರ ಯೋಜನೆ ರವರ ಅನುಮೋದನೆ ಮೇರೆಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಂಬಂಧ ಅಗತ್ಯ ಶುಲ್ಕವಾದ ರೂ. 11,49,000/– ಗಳನ್ನು ಅರ್ಜಿದಾರರಿಂದ ರಸೀದಿ ಸಂಖ್ಯೆ: RE-ifms624-TP/000057 ದಿನಾಂಕ: 31-12-2021 ರಂದು ಸಂದಾಯಿಸಿಕೊಳ್ಳಲಾಗಿದೆ. ಆದುದರಿಂದ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ಅನುಮತಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.

2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

4) ಸ್ವತ್ತಿನ ಸರ್ವೆ ನಂ. 54 ರಲ್ಲಿ ಭಾಗಶಃ ಪ್ರದೇಶ 15 ಗುಂಟೆ ವಿಸ್ತೀರ್ಣವು ಸಾರ್ವಜನಿಕ/ಅರೆ ಸಾರ್ವಜನಿಕ ಉದ್ದೇಶಕ್ಕೆ ದಿನಾಂಕ: 25–10–2002 ರಂದು ಭೂಪರಿವರ್ತನೆಯಾಗಿದ್ದರೂ ಆರ್.ಎಂ.ಪಿ–2015 ರನ್ವಯ ವಸತಿ (ಮುಖ್ಯ) ಭೂಉಪಯೋಗ ವಲಯಕ್ಕೆ ವರ್ಗೀಕರಿಸಿರುವುದರಿಂದ ವಸತಿ ಉದ್ದೇಶಕ್ಕೆ ಭೂಪರಿವರ್ತನೆ ಪರಿಷ್ಕೃತ ಆದೇಶವನ್ನು ಮಾನ್ಯ ಜಿಲ್ಲಾಧಿಕಾರಿಗಳಿಂದ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವ ಮುನ್ನ ಪಡೆದು ಸಲ್ಲಿಸುವುದು.

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

O/o. Joint Director Building License (South)

5) ಸ್ವತ್ತಿಗೆ ಸಂಬಂಧಿಸಿದಂತೆ ಪರಿಷ್ಕೃತ ನಕ್ಷೆ ಮಂಜೂರಾತಿ ಪಡೆಯುವ ಸಮಯದಲ್ಲಿ ದಿನಾಂಕ: 10-07-2020 ರಂದು ನೀಡಿರುವ ಶುಲ್ಕ ಪಾವತಿ ತಿಳುವಳಿಕೆ ಪತ್ರಕ್ಕೆ ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 11346/2020 (LB-BMP) ರ ಮಧ್ಯಂತರ ತಡೆಯಾಜ್ಞೆಯನ್ವಯ ಹಾಗೂ ದಿನಾಂಕ: 09-03-2021 ರಂದು ನೀಡಿರುವ ಶುಲ್ಕವು ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 18 (ಎ) ರಡಿಯಲ್ಲಿ ಪರಿಷ್ಕರಿಸಿ ಸರ್ಕಾರವು ಅಧಿಸೂಚನೆ ಹೊರಡಿರುವ ಶುಲ್ಕಗಳಿಗೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 11641/2021 (LB-BMP) ರ ಆದೇಶದನ್ವಯ ಮಧ್ಯಂತರ ತಡೆಯಾಜ್ಞೆಯನ್ವಯ ಕಟ್ಟಡದ ನಕ್ಷೆಯನ್ನು ಬಿಡುಗಡೆಗೊಳಿಸಲಾಗಿದ್ದರೂ ಸಹ ಪ್ರಸ್ತುತ ಘನ ಉಚ್ಚ ನ್ಯಾಯಾಲಯದಲ್ಲಿ ನೀಡಿರುವ ಮಧ್ಯಂತರ ತಡೆಯಾಜ್ಞೆ ಆದೇಶದಲ್ಲಿರುವ ಶುಲ್ಕಗಳಿಗೆ ಕರ್ನಾಟಕ ನಗರ ಪಾಲಿಕೆ ಅಧಿನಿಯಮ 1976 ಕಲಂ 299(ಎ) ಹಾಗೂ ಬಿಬಿಎಂಪಿ ಕಾಯ್ದೆ 2020 ಕಲಂ 240 (ಎ) ಯಲ್ಲಿ ಶುಲ್ಕಗಳನ್ನು ಪಾವತಿಸಿಕೊಳ್ಳಲು ತಿದ್ದುಪಡಿ ಮಾಡಿರುವುದರಿಂದ ಪಾಲಿಕೆಯ ಕಛೇರಿ ಆದೇಶ ದಿನಾಂಕ: 09-12-2021 ರನ್ವಯ ಈ ಶುಲ್ಕಗಳನ್ನು ಪಾವತಿಸುವ ಬಗ್ಗೆ ದಿನಾಂಕ: 06-01-2022 ರಂದು ಸಲ್ಲಿಸಿರುವ ಮುಚ್ಚಳಿಕೆ ಪತ್ರಕ್ಕೆ ಬದ್ಧರಾಗಿರತಕ್ಕದ್ದು.

6) ಪರಿಷ್ಕೃತ ನಕ್ಷೆ ಮಂಜೂರಾತಿ ಪಡೆದ ದಿನಾಂಕದಿಂದ ಐದು ವರ್ಷದೊಳಗಾಗಿ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

7) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಛೇರಿಗೆ ಮಾರ್ಪಡಿತ ನಿರಾಕ್ಷೇಪಣಾ ಪತ್ರವನ್ನು ಪಡೆಯಲು ದಿನಾಂಕ: 25-01-2022 ರಂದು ಶುಲ್ಕವನ್ನು ಪಾವತಿಸಿರುವ ಬಗ್ಗೆ ಮನವಿಯನ್ನು ಸಲ್ಲಿಸಿರುವುದರಿಂದ ಮಾರ್ಪಡಿತ ನಿರಾಕ್ಷೇಪಣಾ ಪತ್ರವನ್ನು ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವ ಮುನ್ನ ಪಡೆದು ಸಲ್ಲಿಸತಕ್ಕದ್ದು.

8) ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ರಂತೆ ನಿರ್ವಹಿಸುವುದು.

9) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಬಳಸಿಕೊಳ್ಳುವುದು.

10) ಅರ್ಜಿದಾರರು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.

11) ಅರ್ಜಿದಾರರು ಪ್ರತಿ 240.00 ಚ.ಮೀ ಅನುಪಾತ ವಿಸ್ತೀರ್ಣಕ್ಕೆ ಒಂದರಂತೆ ಗಿಡವನ್ನು ನೆಡುವುದು.

ಸಹಿ/-
ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ

M/s. KRS Evergreen Structures
Rep by its Sri. R. Shankrappa and Others
Sy. No. 54, Forest Layout,
Behind Shanthi Sadana
Kengeri Hobli, Mysore Road,
Bangalore – 560 098.

**ಪ್ರತಿಯನ್ನು:** ಕಾರ್ಯಪಾಲಕ ಅಭಿಯಂತರರು (ಕೆಂಗೇರಿ) ವಿಭಾಗ/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ಉಪ ವಿಭಾಗ ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

29/1/2022

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



29/01 29/01 29/01/2022